PW-01
CW-12

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC No.244/2022**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಂಜುನಾಥ ಜಿ. ಎಲ್. |
| ತಂದೆಯ ಹೆಸರು | : | ಲಿಂಗಣ್ಣ ಜಿ. ಎನ್. |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಹೆಚ್.ಸಿ. 82, ದಾವಣಗೆರೆ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 1

ಸಿ.ಡಬ್ಲ್ಯೂ 12

ದಿ: 09-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ದಾವಣಗೆರೆಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ ದಿಃ 21.03.2021 ರಂದು ನಾನು ಕಛೇರಿಯಲ್ಲಿರುವಾಗ ಚಾಸಾ-1 ರವರು ಕಾಡಜ್ಜಿ ಗ್ರಾಮದಲ್ಲಿ ದುರ್ಗಾದೇವಿ ಎಕ್ಸಪ್ಲೊಸಿವ್ ಮಾಕ್ಸಿನ್ ಹತ್ತಿರ ಅಕ್ರಮವಾಗಿ ಸ್ಫೋಟಕ ವಸ್ತುಗಳನ್ನು ಬೂಲೇರಾ ವಾಹನದಲ್ಲಿ ಸಾಗಾಣಿಕೆ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಬಂದಿದ್ದು, ಈ ಬಗ್ಗೆ ದಾಳಿ ಮಾಡಲು ಹೋಗಬೇಕು ಅಂತ ತಿಳಿಸಿರುತ್ತಾರೆ. ಅದರಂತೆ ಚಾಸಾ-1 ರವರ ಜೊತೆ ನಾನು, ಗ್ರಾಮಾಂತರ ಪೊಲೀಸ್ ಠಾಣೆಯ ಚಾಸಾ-10, 11, 13 ರಿಂದ 17 ರವರು, ಎ.ಎಸ್.ಸಿ. ತಂಡದೊಂದಿಗೆ ಬೆಳಿಗ್ಗೆ 10.15 ಗಂಟೆಗೆ ಪೊಲೀಸ್ ಠಾಣೆಯಿಂದ ಹೊರಟು ಕಾಡಜ್ಜಿ ಗ್ರಾಮಕ್ಕೆ 10.45 ಗಂಟೆಗೆ ತಲುಪಿದೆವು. ಸರ್ವೇ ನಂಬರ 54/1P and 54/3 ರಲ್ಲಿರುವ ದುರ್ಗಾದೇವಿ ಎಕ್ಸಪ್ಲೊಸಿವ್ ಮಾಕ್ಸಿನ್ ಸಮೀಪ ಹೋಗಿದ್ದು, ಅಲ್ಲಿ ಒಂದು

ಬೂಲೇರಾ ವಾಹನ ನಿಂತಿತ್ತು. ಸದರಿ ವಾಹನವನ್ನು ತನಿಖಾಧಿಕಾರಿಗಳ ಆದೇಶದ ಮೇರೆಗೆ ನಾನು ಮತ್ತು ಸಿಬ್ಬಂದಿಗಳು ಅಲ್ಲಿ ಹೋಗಿ ತಪಾಸಣೆ ಮಾಡಲಾಗಿ ಅಲ್ಲಿ ವಾಹನದ ಹಿಂಭಾಗದಲ್ಲಿ ತಾಡಪಾರ್ಟ ಶೀಟ್ನ್ನು ಹಾಕಿದ್ದು, ಅದನ್ನು ತೆಗೆದು ನೋಡಿದಾಗ ಅದರಲ್ಲಿ ಸುಮಾರು ಚೀಲಗಳಷ್ಟು ಕಾಟನ್ ಚೀಲಗಳು ಇದ್ದವು. ನಂತರ ಆ ಚೀಲಗಳನ್ನು ತೆಗೆದು ಅದರ ಕೆಳಭಾಗದಲ್ಲಿ ಸುಮಾರು ಪ್ಲಾಸ್ಟಿಕ್ ಚೀಲಗಳು ಇದ್ದವು. ಆ 14 ಪ್ಲಾಸ್ಟಿಕ್ ಚೀಲಗಳಲ್ಲಿ ಸ್ಫೋಟಕ ವಸ್ತುಗಳು ಇದ್ದವು. ಅವುಗಳನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ತನಿಖೆ ಮಾಡಿ ಪಂಚನಾಮೆಗೆ ನಮೂದಿಸಿಕೊಂಡರು. ಸ್ಫೋಟಕ ವಸ್ತುಗಳು ಅಂದರೆ ಜಿಲೆಟಿನ್, ಡಿಟೋನೇಟರ್ , ಪವರ್ ಫ್ಯೂಸ್ ಹಾಗೂ ಇತರೆ ವಸ್ತುಗಳು ಇದ್ದವು.

2. ನಂತರ ಅದರ ಪಕ್ಕದಲ್ಲಿ ಒಂದು ಗೋಡಾನ್ ಇತ್ತು. ಅಲ್ಲಿಗೆ ಹೋಗಿ ನಾವು ನೋಡಿದಾಗ ಅಲ್ಲಿ ಸುಮಾರು 48 ಪ್ಲಾಸ್ಟಿಕ್ ಚೀಲಗಳು ಇದ್ದವು. ಸುಮಾರು 36 ಚೀಲಗಳಲ್ಲಿ ಜಿಲೆಟಿನ್ ಗಳು ಇದ್ದವು. ಸುಮಾರು 02 ಚೀಲದಲ್ಲಿ ಎಲೆಕ್ಟ್ರಾನಿಕ್ ಡೆಟೋನೇಟರ್ಸ ಇದ್ದವು. ಒಂದು ಚೀಲದಲ್ಲಿ ಕನಿಷ್ಟ 200 ಜಿಲೆಟಿನ್ ಗಳು ಇದ್ದವು. 05 ಚೀಲದಲ್ಲಿ ಅಮೋನಿಯಂ ನೈಟ್ರೇಟ್ ವಸ್ತುಗಳು ಇದ್ದವು. ಅವುಗಳನ್ನು ಪಂಚನಾಮೆಯ ಮೂಲಕ ಜಪ್ತು ಮಾಡಲಾಯಿತು. ಈ ಸ್ಫೋಟಕ ವಸ್ತುಗಳನ್ನು ಸುರಕ್ಷತೆಯ ದೃಷ್ಟಿಯಿಂದ ಅವುಗಳನ್ನು ಸ್ಥಳಾಂತರಿಸಲಾಯಿತು. ಈ ಬಗ್ಗೆ ಮಧ್ಯಾಹ್ನ 12.00 -3.30 ಗಂಟೆಯವರೆಗೆ ಪಂಚನಾಮೆ ಮಾಡಲಾಯಿತು. ಆ ಪಂಚನಾಮೆಯನ್ನು ನಿಪಿ-1 ಅಂತ, ಸಾಕ್ಷಿ ಸಹಿಯನ್ನು ನಿಪಿ-1(ಎ) ಅಂತ ಗುರುತಿಸಲಾಯಿತು. ಆ ದಿನ ಒಂದು ಬೂಲೇರಾ ಜೀಪು ಮತ್ತು ಪ್ಲಾಟಿನಮ್ ಬಲ್ಬ ವಶಪಡಿಸಿಕೊಳ್ಳಲಾಯಿತು. ಆರೋಪಿತರನ್ನು ವಶಕ್ಕೆ ತೆಗೆದುಕೊಳ್ಳಲಾಯಿತು. ಪಂಚನಾಮೆಯಲ್ಲಿ ಸ್ಫೋಟಕ ವಸ್ತುಗಳನ್ನು ವಿವರವಾಗಿ ಬರೆಯಲಾಗಿದೆ. ಅದು 1 ರಿಂದ 7 ಇರುತ್ತದೆ. ತಾಡಪಾರ್ಟನ್ನು ಈಗ ನೋಡುತ್ತಿದ್ದು, ಅದನ್ನು ಮು.ಮಾ.1 ಅಂತ ಗುರುತಿಸಲಾಯಿತು. ಆ ದಿನ ಅಮಾನತ್ತು ಪಡಿಸಿಕೊಂಡ ವಾಹನಗಳನ್ನು ಈಗ ನೋಡಿದ ಎರಡು ಪೋಟೋಗಳಲ್ಲಿ ನೋಡಿ ಗುರುತಿಸುತ್ತೇನೆ. ಈ

PW-01
CW-12

ಪೋಟೋಗಳನ್ನು ನಿಪಿ-2 ಮತ್ತು 3 ಅಂತ ಗುರುತಿಸಲಾಯಿತು. ಗೈರು ಹಾಜರಿರುವಂತಹ ಆರೋಪಿತರನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲ ಅಂತ ಅರ್ಜಿಯನ್ನು ಸಲ್ಲಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಉಳಿದ ಆರೋಪಿತರನ್ನು ಸಾಕ್ಷಿದಾರರು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ**:

ವಕೀಲರು ಸಮಯ ಕೇಳಿರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

(ವೇಲಾ ಡಿ.ಕೆ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.